# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಛೇರಿ:
ನಂ-29, ವಿಜಯನಗರ 2ನೇ ಹಂತ,
ಹಿನಕಲ್, ಮೈಸೂರು-570017
ವೆಬ್ ಸೈಟ್: www.cescmysore.org
CIN:U40109KA2004SGC035177

C.E.S.C, MYSORE

ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ ಮತ್ತು ಕೊಡಗು,
ಶ್ರೀ ಹರ್ಷರಸ್ತೆ, ಚಾ.ವಿ.ಸ.ನಿ.ನಿ., ಮೈಸೂರು.
ದೂರವಾಣಿ: 0821-2420850, ಫ್ಯಾಕ್ಸ್:0821-2434077
ಈ-ಮೇಲ್: seechnkodagu@cescmysore.org


ಚಾ.ವಿ.ಸ.ನಿ.ನಿ., ಸಂ. 1039 ದಿ. 16/02/18

ಸಂಖ್ಯೆ: ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ-127/2017-18/ ey8 . 230 ದಿನಾಂಕ: 03.02.2018 15

## ಸಭೆಯ ನಡಾವಳಿಗಳು

ದಿನಾಂಕ 17.01.2018ರಂದು ವಿರಾಜಪೇಟೆ ಉಪವಿಭಾಗ ಕಛೇರಿಯಲ್ಲಿ ಅಧೀಕ್ಷಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ನಡೆದ ಜನ ಸಂಪರ್ಕ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದವರು:-

1. ಶ್ರೀ.ಕೆ.ರಾಮಚಂದ್ರ : ಅಧೀಕ್ಷಕ ಇಂಜಿನಿಯರ್ (ವಿ), ಮೈಸೂರು ವೃತ್ತ.
2. ಶ್ರೀಮತಿ ತಾರಾ ಎಸ್. : ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), ವೃತ್ತ ಕಛೇರಿ, ಮೈಸೂರು.
3. ಶ್ರೀ.ಬಿ.ಸೋಮಶೇಖರ್ : ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), ಮಡಿಕೇರಿ ವಿಭಾಗ.
4. ಶ್ರೀ.ಪಿ.ಎಸ್.ಸುರೇಶ್ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿರಾಜಪೇಟೆ ಉಪವಿಭಾಗ.
5. ಶ್ರೀ.ಪಿ.ಎಸ್.ದೇವಯ್ಯ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ತಾಂ), ಮಡಿಕೇರಿ ವಿಭಾಗ.
6. ಶ್ರೀ.ವಿ.ಎಂ.ನಾಗರಾಜು : ಲೆಕ್ಕಾಧಿಕಾರಿಗಳು, ಮಡಿಕೇರಿ ವಿಭಾಗೀಯ ಕಛೇರಿ
7. ಶ್ರೀಮತಿ ಅಲ್ಫೆನ್ಸೋ : ಲೆಕ್ಕಾಧಿಕಾರಿಗಳು (ಆಂ.ಲೆ.ಪ), ಮಡಿಕೇರಿ ವಿಭಾಗೀಯ ಕಛೇರಿ.
8. ಶ್ರೀ.ಶಿವನಗೌಡ ಪಾಟೀಲ : ಸಹಾಯಕರು ಇಂಜಿನಿಯರ್(ವಿ), ವಿರಾಜಪೇಟೆ ಶಾಖೆ.
9. ಶ್ರೀ.ಎಚ್.ಎಸ್.ರಮೇಶ್ : ಕಿರಿಯ ಇಂಜಿನಿಯರ್(ವಿ), ಅಮ್ಮತ್ತಿ ಶಾಖೆ.
10. ಶ್ರೀ.ಕೆ.ಎಂ.ದಿಲೀಪ್ : ಸಹಾಯಕರು ಇಂಜಿನಿಯರ್(ತಾಂ), ವಿರಾಜಪೇಟೆ ಉಪವಿಭಾಗ.
11. ಶ್ರೀ.ಎನ್.ಟಿ.ಮಾದಯ್ಯ : ಪ್ರಭಾರ ಕಿರಿಯ ಇಂಜಿನಿಯರ್(ವಿ), ಪಾಲಿಬೆಟ್ಟ ಶಾಖೆ.
12. ಶ್ರೀಮತಿ ಬಿ.ಜಿ. ಚಂಪಾವತಿ : ಪ್ರಭಾರ ಕಿರಿಯ ಇಂಜಿನಿಯರ್(ವಿ), ಸಿದ್ದಾಪುರ ಶಾಖೆ.
13. ಶ್ರೀ.ಹರೀಶ್.ಎಂ.ಎಸ್ : ಹಿರಿಯ ಸಹಾಯಕರು, ಕಂದಾಯ ಶಾಖೆ, ವಿರಾಜಪೇಟೆ

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸಭೆಗೆ ಹಾಜರಿದ್ದ ಅಧೀಕ್ಷಕ ಇಂಜಿನಿಯರ್ (ವಿ) ರವರಾದ ಕೆ.ರಾಮಚಂದ್ರ ರವರನ್ನು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳುವಂತೆ ವಿನಂತಿಸಿಕೊಳ್ಳುತ್ತ ಸಭೆಗೆ ಹಾಜರಿದ್ದ ಎಲ್ಲರನ್ನೂ ಸ್ವಾಗತಿಸಿದರು. ಅಧೀಕ್ಷಕ ಇಂಜಿನಿಯರ್ ರವರು ದಿನಾಂಕ:14.11.2017 ರಂದು ನಡೆದ ಸಭೆಯ ನಡಾವಳಿಗಳ ಬಗ್ಗೆ ಹಾಗು ಸಾಧಿಸಿದ ಪ್ರಗತಿ ಬಗ್ಗೆ ಚರ್ಚಿಸಿ ಸಭೆಯಲ್ಲಿ ಹಾಜರಿದ್ದ ಗ್ರಾಹಕರ ಕುಂದುಕೊರತೆಗಳನ್ನು ಆಲಿಸಿ ಈ ಕೆಳಕಂಡಂತೆ ಸಲಹೆ ಸೂಚನೆಗಳನ್ನು ನೀಡಿದರು.

ದಿನಾಂಕ 02.08.2017 ರಂದು ವಿರಾಜಪೇಟೆ ಉಪವಿಭಾಗದಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಬಾಕಿ ಉಳಿದಿರುವ ದೂರುಗಳ ವಿವರ

| ಕ್ರಮ ಸಂಖ್ಯೆ | ಸಲಹೆ/ದೂರು ಗಳನ್ನು ನೀಡಿದ ಸದಸ್ಯರ ಹೆಸರು ಮತ್ತು ವಿಳಾಸ | ಸಲಹೆ/ದೂರುಗಳ ವಿವರ | ಸಲಹೆ/ ದೂರುಗಳಿಗೆ ಉತ್ತರ |
|---|---|---|---|
| 1 | ಶ್ರೀ.ಚೇಕು | ಅಮ್ಮತ್ತಿ ಶಾಖಾ ವ್ಯಾಪ್ತಿಯ ಹಾಲುಗುಂದ ಗ್ರಾಮದ ಅನಿಯಮಿತ ವಿದ್ಯುತ್ ಅಡಚಣೆಯನ್ನು ನಿವಾರಿಸುವ ಬಗ್ಗೆ ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ತಿಳಿಸಿದರು. | * ಮುಖ್ಯ ಇಂಜಿನಿಯರ್(ವಿ) ರವರ ಕಛೇರಿಯಿಂದ ಕೆಲವು ನ್ಯೂನತೆಗಳೊಂದಿಗೆ ಅಂದಾಜುಪಟ್ಟಿಯನ್ನು ಹಿಂತಿರುಗಿಸಲಾಗಿದೆ. ನ್ಯೂನತೆಗಳನ್ನು ಸರಿಪಡಿಸಲಾಗಿದ್ದು ಅಂದಾಜುಪಟ್ಟಿಯನ್ನು ಮರುಸಲ್ಲಿಸಲಾಗಿದೆ.. |

ಚಾ.ವಿ.ಸ.ನಿ.ನಿ. ಸಂ. 3638 ದಿ. 17/2/18

DGM (Conml) 17/2

ದಿನಾಂಕ 17.01.2018 ರಂದು ಪಡೆದ ದೂರುಗಳ ವಿವರ:-

| ಕ್ರಮ ಸಂಖ್ಯೆ | ಸಲಹೆ/ದೂರುಗಳನ್ನು ನೀಡಿದ ಸದಸ್ಯರ ಹೆಸರು ಮತ್ತು ವಿಳಾಸ | ಸಲಹೆ/ದೂರುಗಳ ವಿವರ | ಸಲಹೆ/ ದೂರುಗಳಿಗೆ ಉತ್ತರ |
|---|---|---|---|
| 1 | ಶ್ರೀ.ಪೂಣಚ್ಚ, ವಿ.ಬಾಡಗ ಗ್ರಾಮ ದೂ.9448634371 | * ವಿ.ಬಾಡಗ ಗ್ರಾಮದ 63 ಕೆ.ವಿ.ಎ ಪೊದಕೇರಿ ಪರಿವರ್ತಕದ ಕಂಬಗಳು ಶಿಥಿಲಗೊಂಡಿದ್ದು ಬದಲಾಯಿಸುವಂತೆ ತಿಳಿಸಿದರು.<br>* ವಿ.ಬಾಡಗ ಗ್ರಾಮದ ಪರಿವರ್ತಕದ ಎಲ್.ಟಿ.ಮಾರ್ಗವು ತೋಟದ ಮಧ್ಯ ತುಂಬಾ ದೂರ ಹಾದುಹೋಗಿದ್ದು ಹತ್ತಿರದಲ್ಲೇ ಇರುವ ಇನ್ನೊಂದು ಪರಿವರ್ತಕದ ಮೇಲೆ ಸದರೀ ಎಲ್.ಟಿ.ಮಾರ್ಗವನ್ನು ಜೋಡಣೆ ಮಾಡುವಂತೆ ತಿಳಿಸಿದರು.<br>* ಬಿ.ಶೆಟ್ಟಿಗೇರಿ ಸುತ್ತಮುತ್ತಲ 9 ಗ್ರಾಮಗಳು ವಿರಾಜಪೇಟೆ ಶಾಖೆಗೆ ಒಳಪಟ್ಟಿದ್ದು ವಿರಾಜಪೇಟೆ ಪಟ್ಟಣದಿಂದ ಸುಮಾರು 20 ಕಿ.ಮೀ ಅಂತರವಿರುತ್ತದೆ. ಬಿ.ಶೆಟ್ಟಿಗೇರಿ ಫೀಡರ್‌ನಲ್ಲಿ 5000ಕ್ಕೂ ಮೇಲ್ಪಟ್ಟು ಸ್ಥಾವರಗಳಿದ್ದು ಕಛೇರಿ ಕೆಲಸ ಹಾಗೂ ವಿದ್ಯುತ್ ಮಾರ್ಗ ದುರಸ್ಥಿ ಕೆಲಸವನ್ನು ನಿರ್ವಹಿಸಲು ಕೇವಲ ಇಬ್ಬರು ಮಾರ್ಗದಾಳುಗಳಿದ್ದು ವಿದ್ಯುತ್ ಕೆಲಸ ಕಾರ್ಯಗಳು ತುಂಬಾ ವಿಳಂಭವಾಗುತ್ತಿದ್ದು ಪ್ರತ್ಯೇಕ ಶಾಖಾ ಕಛೇರಿ ಹಾಗೂ ಹೆಚ್ಚುವರಿ ಮಾರ್ಗದಾಳುಗಳನ್ನು ನೇಮಿಸುವಂತೆ ಕೇಳಿಕೊಂಡರು. | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜನಿಯರ್(ವಿ) ರವರು ಮಾತನಾಡುತ್ತ ಕೂಡಲೇ ಸ್ಥಳ ಪರಿಶೀಲನೆ ಮಾಡಿ ನಿಗಮದ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳುವಂತೆ ಸಹಾಯಕ ಇಂಜಿನಿಯರ್ (ವಿ) ರವರಿಗೆ ಸೂಚಿಸಿದರು.<br>* ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜನಿಯರ್(ವಿ) ರವರು ಮಾತನಾಡುತ್ತ ಕೂಡಲೇ ಸ್ಥಳ ಪರಿಶೀಲನೆ ಮಾಡಿ ನಿಗಮದ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳುವಂತೆ ಸಹಾಯಕ ಇಂಜಿನಿಯರ್ (ವಿ) ರವರಿಗೆ ಸೂಚಿಸಿದರು.<br>* ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜನಿಯರ್(ವಿ) ರವರು ಪ್ರತ್ಯೇಕ ಶಾಖೆ ಸ್ಥಾಪಿಸಲು ಮೇಲಧಿಕಾರಗಳಿಗೆ ಶಿಫಾರಸು ಪತ್ರ ಬರೆಯುವಂತೆ ಹಾಗೂ ಸೂಕ್ತ ಕ್ರಮ ಕೈಗೊಳ್ಳುವಂತೆ ಸ.ಕಾ.ನಿ.ಇಂಜಿನಿಯರ್ (ವಿ) ರವರಿಗೆ ಸೂಚಿಸಿದರು |
| 2 | ಶ್ರೀಮತಿ.ಗೀತಾ, ಕರಡಿಗೋಡು ಗ್ರಾಮ, ಸಿದ್ದಾಪುರ ದೂ.8861644617 | * ದಿನಾಂಕ:05.04.2016 ರಂದು ಸಿದ್ದಾಪುರ ಶಾಖಾ ವ್ಯಾಪ್ತಿಗೆ ಬರುವ ಸಿದ್ದಾಪುರ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಸುಣ್ಣದ ಗೂಡು ಎಂಬ ಸ್ಥಳದಲ್ಲಿ ತಮ್ಮ ಪತಿಯಾದ ಶಶಿ ಎಂಬುವವರು ಗುಂಡಿಗೆ ಬಿದ್ದು ಮೃತಪಟ್ಟಿದ್ದು ಇದುವರೆವಿಗೂ ನಿಗಮದಿಂದ ಯಾವುದೇ ರೀತಿಯ ಪರಿಹಾರ ಒದಗಿಸದೇ ಇರುವ ಬಗ್ಗೆ. | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜನಿಯರ್(ವಿ) ರವರು ಮಾತನಾಡುತ್ತಾ ಸಂಭಂಧಪಟ್ಟ ವಿಷಯವನ್ನು ಈಗಾಗಲೇ ನ್ಯಾಯಾಲಯದಲ್ಲಿ ದಾವೆ ಹೂಡಲಾಗಿರುವುದರಿಂದ ಸದರೀ ವಿಚಾರದ ಬಗ್ಗೆ ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಮಾಹಿತಿ ನೀಡುವುದಾಗಿ ತಿಳಿಸಿದರು |
| 3 | ಲಿಯಾಕತ್ ಅಲಿ, ಆರ್ಜಿ ಕಲ್ಲುಬಾಣೆ ದೂ.9449273444 | * ಆರ್ಜಿ ಕಲ್ಲುಬಾಣೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ತಾವು ನಡೆಸುತ್ತಿರುವ ಅನ್ವರುಲ್ ಹುದಾ ಅನಾಥಶ್ರಮದ ಕಟ್ಟಡಕ್ಕೆ ಪರಿವರ್ತಕವನ್ನು ಅಳವಡಿಸಿದ್ದು ಶಾಶ್ವತ ವಿದ್ಯುತ್ ಸಂಪರ್ಪ ನೀಡದ ಬಗ್ಗೆ. | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜನಿಯರ್(ವಿ) ರವರು ಸ.ಕಾ.ನಿ.ಇಂಜಿಯರ್ (ವಿ) ರವರಿಗೆ ಮಾಹಿತಿಯನ್ನು ಒದಗಿಸುವಂತೆ ತಿಳಿಸಿದರು, ಇದಕ್ಕೆ ಸ.ಕಾ.ನಿ.ಇಂ(ವಿ) ರವರು ಮಾತನಾಡುತ್ತಾ ಸಂಬಂಧಿತ ಸ್ಥಾವರಕ್ಕೆ ಆ ಗ್ರಾಮ ಪಂಚಾಯತಿಯಿಂದ 26.10.2015 ರಂದು ವಿದ್ಯುದ್ಧೀಕರಣಗೊಳಿಸಲು ನಿರಾಕ್ಷೇಪಣಾ ಪತ್ರ ಒದಗಿಸಿದ್ದು ಆ ಪ್ರಕಾರವಾಗಿ 18.05.2016 ರಂದು ಸದರಿ ಸ್ಥಾವರಕ್ಕೆ ವಿದ್ಯುದ್ದೀಕರಣಗೊಳಿಸಲು ಮಂಜೂರಾತಿಗೊಂಡಿದ್ದು ಕಾರ್ಯ ಕೈಗೆತ್ತಿಕೊಳ್ಳಲಾಗಿತ್ತು. ತದನಂತರದಲ್ಲಿ ಕಾಮಗಾರಿ ಮುಗಿದ ನಂತರ ದಿನಾಂಕ:20.12.2017 ರಂದು ಸಂಭಂಧಿತ ಗ್ರಾಮ ಪಂಚಾಯ್ತಿಯಿಂದ ನಿರಾಕ್ಷೇಪಣ ಪತ್ರವನ್ನು ರದ್ದುಗೊಂಡಿರುವ ಬಗ್ಗೆ ಲಿಖಿತ ಪ್ರತಿ ಒದಗಿಸಿರುವುದರಿಂದ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿದ್ದು ಈ ವಿಚಾರವಾಗಿ ಮೇಲಧಿಕಾರಿಯವರ ಗಮನಕ್ಕೆ ತಂದು ಪತ್ರ ವ್ಯವಹಾರ ನಡೆಸಲಾಗಿರುವ ಬಗ್ಗೆ |

| | | |
|---|---|---|
| | | ತಿಳಿಸಿದರು.<br><br>* ಮುಂದುವರಿದು ಅಧೀಕ್ಷಕ ಇಂಜಿನಿಯರ್ (ವಿ) ರವರು ಸಂಭಂಧಿತ ಗ್ರಾಮ ಪಂಚಾಯ್ತಿಯಿಂದ ನಿರಾಕ್ಷೇಪಣಾ ಪತ್ರ ರದ್ದುಗೊಂಡಿರುವ ಕಾರಣ ಕಾಮಗಾರಿಯನ್ನು ಸ್ಥಗಿತಗೊಳಿಸಿರುವುದಾಗಿ ಹಾಗೂ ಪಂಚಾಯ್ತಿಯಿಂದ ನಿರಾಕ್ಷೇಪಣಾ ಪತ್ರ ಒದಗಿಸಿದಲ್ಲಿ ವಿದ್ಯುತ್ ಸಂಪರ್ಕ ನೀಡಲಾಗುವುದಾಗಿ ತಿಳಿಸಿದರು ಹಾಗೂ ಕಾರ್ಯ ನಿರ್ವಾಹಕ ಅಭಿಯಂತರರಿಗೆ ಈ ವಿಚಾರವಾಗಿ ಸೂಕ್ತ ನಿರ್ದೇಶನ ನೀಡಲು ಸಿ.ಇ.ಓ ಗೆ ಪತ್ರ ಬರೆಯುವಂತೆ ಸೂಚಿಸಿದರು. |

ಮುಂದುವರೆದು ಅಧೀಕ್ಷಕ ಇಂಜಿನಿಯರ್(ವಿ) ರವರು ಮಾತನಾಡುತ್ತಾ ವಿದ್ಯುತ್ ಬಿಲ್ಲಿಂಗ್‌ನ ಪ್ರಗತಿಯು ಸುಧಾರಣೆಗೊಳ್ಳುತ್ತಿದ್ದು ಇನ್ನು ಹೆಚ್ಚಿನ ಮುತುವರ್ಜಿ ವಹಿಸಿ ಶೇಕಡ 100 ರಷ್ಟು ಪ್ರಗತಿ ಸಾಧಿಸುವಂತೆ ಸಂಭಂಧಪಟ್ಟ ಏಜೆನ್ಸಿಯವರಿಯವರಿಗೆ ಸೂಚಿಸಿದರು.

ಮುಂದುವರೆದು, ಎಲ್ಲಾ ಶಾಖಾಧಿಕಾರಿಗಳಿಗೆ ತಮ್ಮ ಶಾಖಾ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಮಾರ್ಗದಾಳುಗಳಿಗೆ ಸುರಕ್ಷಿತ ಕ್ರಮದ ಬಗ್ಗೆ ತಿಳಿಸುವಂತೆ ಹಾಗೂ ಒದಗಿಸಿರುವ ಸುರಕ್ಷಿತ ಸಾಮಗ್ರಿಗಳನ್ನು ಸೂಕ್ತ ರೀತಿಯಲ್ಲಿ ಉಪಯೋಗಿಸುವಂತೆ ನಿರ್ದೇಶನ ನೀಡಲು ಸೂಚಿಸಿದರು ಹಾಗೂ ಪ್ರತಿಯೊಬ್ಬ ಮಾರ್ಗದಾಳು ಮಾರ್ಗದಲ್ಲಿ ಕೆಲಸ ಮಾಡುವಾಗ ಸುರಕ್ಷಿತ ಸಾಮಾಗ್ರಿಗಳನ್ನು ಕಡ್ಡಾಯವಾಗಿ ಉಪಯೋಗಿಸುವಂತೆ ನೋಡಿಕೊಳ್ಳಬೇಕಾಗಿ ತಿಳಿಸಿದರು.

ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವ) ರವರು ಮಾತನಾಡುತ್ತ ಸಾರ್ವಜನಿಕ ಕುಡಿಯುವ ನೀರು ಹಾಗೂ ಬೀದಿದೀಪ ಸ್ಥಾವರದ ಬಿಲ್ ಗಳನ್ನು ಹಾಗೂ ಎಲ್.ಟಿ ರೇಟಿಂಗ್ ರಿಪೋರ್ಟ್‌ಗಳನ್ನು ಹಿರಿಯ ಸಹಾಯಕರ್‍ರು ಈ ದಿನದವರಗೆ ಒದಗಿಸದೇ ಇರುವ ಬಗ್ಗೆ ಅಧೀಕ್ಷಕ ಇಂಜಿಯರ್ ರವರ ಗಮನಕ್ಕೆ ತಂದರು, ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿಯರ್(ವಿ) ರವರು ಹಿರಿಯ ಸಹಾಯಕರಿಗೆ ಸಂಬಂಧಿಸಿದ ವರದಿಯನ್ನು ದಿನಾಂಕ:22.01.2018 ರೊಳಗೆ ತಪ್ಪದೇ ಸಲ್ಲಿಸುವಂತೆ ಸೂಚಿಸಿದರು ತಪ್ಪಿದಲ್ಲಿ ನಿಗಮದ ನಿಮಾನುಸಾರ ಸೂಕ್ತ ಕ್ರಮ ಕೈಗೊಳ್ಳುವಂತೆ ಸ.ಕಾ.ನಿ.ಇಂಜಿಯರ್ ರವರಿಗೆ ಸೂಚಿಸದರು ಮುಂದುವರಿದು ಎಲ್ಲಾ ಶಾಖಾಧಿಕಾರಿಗಳಿಗೆ ಸಾರ್ವಜನಿಕ ಬೀದಿದೀಪದ ಸ್ಥಾವರದ ವಿವರಗಳನ್ನು ತಿಂಗಳ ಕೊನೆಯೊಳಗೆ ಸಲ್ಲಿಸುವಂತೆ ತಿಳಿಸಿದರು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಆದ ಶ್ರೀ.ಸುರೇಶ್‌ರವರು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸುತ್ತ ಗ್ರಾಹಕರಿಗೆ ಉತ್ತಮ ಸೇವೆ ಸಲ್ಲಿಸಲು ಎಲ್ಲಾ ಸದಸ್ಯರ ಸಹಕಾರ ಕೋರಲಾಯಿತು ಹಾಗು ನಿಗಮದ ವತಿಯಿಂದ ಗ್ರಾಹಕರಿಗೆ ಉತ್ತಮ ಸೇವೆ ಸಲ್ಲಿಸಲು ಸರ್ವ ಪ್ರಯತ್ನ ಮಾಡಲಾಗುವುದೆಂದು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಧೀಕ್ಷಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು

<u>ಪ್ರತಿಯನ್ನು:</u>

1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ಮಡಿಕೇರಿ ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ವಿರಾಜಪೇಟೆ ಉಪವಿಭಾಗ ರವರ ಮಾಹಿತಿಗಾಗಿ.
7. ಹಿಆಸ/ಪ್ರಕ/ಕಡತ.